

ಮಾಡಾದಲ್ವ... ಯಾರೂ ಕೇಳಂಗಿಲ್ಲ ಅನ್ನೋ ಧೈರ್ಯ' ಎಂದಳು ಖಿನ್ನವಾದ ದನಿಯಲ್ಲಿ.

ತಮ್ಮಿಬ್ಬರ ಕಣ್ಣಿಗೂ ಮಣ್ಣೆರೆಚಿ ಇನ್ನೊಬ್ಬಳನ್ನು ಕಟ್ಟಿಕೊಂಡ ಇಲಿಯಾಸ್ ಪಾಶಾನನ್ನು ಮನಸಾ ಬೈದು ಶಾಪ ಹಾಕಿದರು. ತಮ್ಮ ಅದೃಷ್ಟವೇ ಸರಿ ಇಲ್ಲವೆಂದೂ, ಕಡೆಗೆ ತಮ್ಮ ಧರ್ಮದಲ್ಲಿರುವ ಈ ಸಡಿಲ ನೀತಿಯಿಂದಲೇ ತಮ್ಮಿಬ್ಬರಿಗೂ ಅನ್ಯಾಯವಾಗಿದೆಯಂತಲೂ ನೊಂದು ಕೊರಗುತ್ತಾ ಒಬ್ಬರಿಗೊಬ್ಬರು ಸಾಂತ್ವನಿಸಿಕೊಂಡರು.

ಕಾಲ ಓಡುತ್ತಿತ್ತು. ಇಲಿಯಾಸ್ ಪಾಶಾ ಸತ್ತು ಆರು ತಿಂಗಳೇ ಕಳೆದಿತ್ತು. ಅವಳು ಕಾನೂನುಬದ್ಧ ಹೆಂಡತಿಯಾದ ಕಾರಣ ಅವಳಿಗೂ ಪಿಂಚಣಿಯಲ್ಲಿ ಪಾಲು ಬರಬೇಕೆಂದು ಮಸೀದಿಯ ಮೌಲ್ವಿಗಳೇ ಬಂದು ಹೇಳಿ ಹೋದರು. ಆ ಮಾತಿನ ಮೇಲೆ ಅವರು ಸರ್ವೀಸಿನ ಕಡೆಯ ದಿನಗಳಲ್ಲಿ ಕೆಲಸ ಮಾಡುತ್ತಿದ್ದ ಆಫೀಸಿಗೆ ಹೋಗಿದ್ದಳು ಖತೀಜಾ. ಅವರ ಆದೇಶದಂತೆ ಮೌಲ್ವಿಯವರನ್ನು ಹುಡುಕಿ ಹೊರಟರು ಫಾತುಮ್ಮ ಖತೀಜಾ. ಮೌಲ್ವಿ ರಹೀಮ್ ಸಾಹೇಬರ ಮನೆ ಹೊಳೇನರಸೀಪುರದ ಪೇಟೆಬೀದಿಯಲ್ಲಿತ್ತು. ಇವರ ಅಹವಾಲನ್ನೆಲ್ಲ ಕೇಳಿ ಅವರೂ ಕನಿಕರಿಸಿ, 'ನೀವೇನೂ ಯೋಚನೆ ಮಾಡಬೇಡಿ. ನಾನು ಬುಕ್ ತೆಗೆದು ಅವರಿಬ್ಬರ ನಿಕಾಹ್ ಆದ ದಿನದ ದಾಖಲಾತಿಯನ್ನು ತೆಗೆಯುತ್ತೇನೆ. ಕಬೂಲಿಯತ್ತಿನ ದಾಖಲೆ ತೆಗೆದುಕೊಡ್ತೀನಿ. ನೀವು ಆಫೀಸಿನ ಪೆನ್‌ಶನ್ ಸೆಕ್ಷನ್ನಿಗೆ ಕೊಡಿ. ಅವರೇ ಕೋರ್ಟಿಗೆ ಕಳಿಸ್ತೀನಿ ಅಂದಿದ್ದಾರಲ್ಲ... ನಾವು ಕೊಟ್ಟ ರುಜುವಾತನ್ನು ಕೋರ್ಟು ಪ್ರಶ್ನೆ ಮಾಡೋದಿಲ್ಲ ಒಪ್ಕೊಳ್ಳತ್ತೆ. ಕೋರ್ಟಿಂದ ಖತೀಜಾ ಶರೀಯ ಪ್ರಕಾರ ಹೆಂಡತಿ ಅಂತ ಬಂದರೆ ಇವಳಿಗೂ ಒಂದು ಪಾಲು ಪಿಂಚಣಿ ಬರುತ್ತೆ' ಅಂದರು. ಹೇಳಿದಂತೆ ಕಾಗದ ಪತ್ರ ಮಾಡಿಕೊಟ್ಟರು.

ಕೋರ್ಟಿಂದ ಆದೇಶ ಬಂದ ಮೇಲೆ ಇಲಿಯಾಸ್ ಪಾಶಾನ ಕಾನೂನುಬದ್ಧ ಹೆಂಡತಿಯಾದ ಖತೀಜಾಳಿಗೂ ಮೂರನೇ ಒಂದು ಭಾಗ ಪಿಂಚಣಿ ಬರತೊಡಗಿತು. ಹೊಳೇನರಸೀಪುರದ ಕೆನರಾ ಬ್ಯಾಂಕಿನ ಖಾತೆಗೆ ಜಮೆಯಾಗತೊಡಗಿತು.

ಆರು ವರ್ಷಗಳಲ್ಲಿ ಇಲಿಯಾಸ್‌ಪಾಶಾನ ಮೊದಲ ಪತ್ನಿ ಅಲ್ಲಾಹುವಿಗೆ ಪ್ಯಾರಿಯಾಗಿಬಿಟ್ಟಾಗ ಅವಳ ಭಾಗದ ಪಿಂಚಣಿ ಉಳಿದಿಬ್ಬರು ಹೆಂಡತಿಯರಿಗೆ ಹಂಚಿಕೆಯಾಯಿತು.

●